**<u>ದಿನಾಂಕಃ 05.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಕೆ.ಟಿ.ಟಿ. ವಕೀಲರಿಂದಃ-</u>

1) ಪ್ರಸ್ತುತ ದಾವೆ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ದಾವೆಯು ಓಡಾಡುವ ದಾರಿಗೆ ತೊಂದರೆ ಕೊಡಬಾರದು ಎಂದು ಸಲ್ಲಿಸಿದ್ದೇನೆ. ದಾವಾ ಷೆಡ್ಯೂಲ್ ಸರ್ವೆ ನಂಬರ್ ನ ಸಂಖ್ಯೇ ನನಗೆ ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಸೇರಿದ ಸ್ವತ್ತುಗಳ ಸರ್ವೆ ನಂಬರ್ 199/4 ರಲ್ಲಿ 34 ಗುಂಟೆ, 173/2 ರಲ್ಲಿ 27 ಗುಂಟೆ, 198/2 ರಲ್ಲಿ 32 ಗುಂಟೆ. ನನಗೆ ಸೇರಿದ ಸರ್ವೆ ನಂಬರ್ ಗಳ ಸ್ವತ್ತಿಗೂ ಪ್ರತಿವಾದಿಯ ಸ್ವತ್ತುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಸ್ವತ್ತಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ.

2) ಕೆರೆಯ ಏರಿ ಮೇಲೆ ಶುರುವಾಗುವ ರಾಜ್ಯ ಹೆದ್ದಾರಿಯ ದಕ್ಷಿಣದ ಕಡೆಗೆ ಸೋಮನಾಥಪುರದ ಕಡೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ನನ್ನ ಸ್ವತ್ತಿನಲ್ಲಿ ತೆಂಗಿನ ಮರ ಹೊರತುಪಡಿಸಿ ಬೇರೆ ಯಾವುದೇ ಮರಗಳು ಇಲ್ಲ. ನಿಮ್ಮ ಸ್ವತ್ತಿನಲ್ಲಿ ತೇಗದ ಮರ ಸಹಾ ಇದೆ ಎಂದರೆ ಸರಿ. ಸೋಮನಾಥಪುರದ ರಸ್ತೆಯವರೆಗೂ ನಮ್ಮ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಇವೆ ಎಂದರೆ ಸರಿಯಲ್ಲ. ಸಡರಿ ಸೋಮನಾಥಪುರದ ರಸ್ತೆಗೆ ಹೊಂದಿಕೊಂಡಂತೆ ನಮಗೆ ಸೇರಿದ ಬೋರ್ವೆಲ್ ಮತ್ತು ಪಂಪ್ ಸೆಟ್ ಮನೆ ಇದೆ ಎಂದರೆ ಸರಿ. ನಾನು ನನ್ನ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. 2 ನೇ ವಾದಿ ಪರ ಸಾಕ್ಷ್ಯ ನುಡಿಯುತ್ತಿಲ್ಲ.

3) ನಿಪಿ.1 ರ 13 ನೇ ಪುಟದಲ್ಲಿ ದಾವಾ ಐಟಂ ನಂ.3 ಸರ್ವೆ ನಂ.199/4 ರ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಸದರಿ ನಿಪಿ.1 ರ ದಾಖಲಾತಿಯಲ್ಲಿ 1 ನೇ ಪ್ರತಿವಾದಿಯ ಜಮೀನು ಸರ್ವೆ ನಂ.199/4 ರ ಯಾವ ದಿಕ್ಕಿಗೆ ಬರುತ್ತದೆ ಎಂದು ನಮೂದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.199/4 ರಲ್ಲಿ ರಸ್ತೆಗಾಗಿ ಜಮೀನನ್ನು ಕಳೆದಿದ್ದಾರೆಯೇ

ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.199/3 ರಲ್ಲಿ ರಸ್ತೆಗಾಗಿ ಜಮೀನನ್ನು ಕಳೆದಿದ್ದಾರೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ.13 ರಿಂದ 15 ರ ಪೋಟೋಗಳಲ್ಲಿ ಮುಳ್ಳಿನ ಕೆರೆ ಏರಿ ರಸ್ತೆ ಕಾಣಿಸುತ್ತದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ನಿಪಿ.13 ರಿಂದ 15 ರಲ್ಲಿ ರಾಜ್ಯ ಹೆದ್ದಾರಿ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ.

4) ಈ ಹಂತದಲ್ಲಿ ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಸದರಿ ಪೊಟೋದಲ್ಲಿ ಕಾಣುವ ರಸ್ತೆ ಮುಳ್ಳಿನಕೆರೆ ಏರಿ ರಸ್ತೆ (ರಾಜ್ಯ ಹೆದ್ದಾರಿ) ಎಂದರೆ ಸರಿ. ಸದರಿ ಪೊಟೋವನ್ನು ನಿಡಿ.1 ಎಂದು ಗುರುತಿಸಲಾಯಿತು. ಮತ್ತೊಂದು ಪೊಟೋದಲ್ಲಿ ಹೋಗುತ್ತಿರುವ ಮಿನಿ ಬಸ್ ರಸ್ತೆ ರಾಜ್ಯ ಹೆದ್ದಾರಿ ಎಂದು ಒಪಿಕೊಂಡ ಕಾರಣ ಸದರಿ ಪೊಟೋವನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಕಾಣುವ ಮಣ್ಣಿನ ರಸ್ತೆ ಸೋಮನಾಥಪುರಕ್ಕೆ ಹೋಗುವ ರಸ್ತೆ ಎಂದರೆ ಸರಿ. ಸಾಕ್ಷಿಗೆ ಮತ್ತೊಂದು ಪೊಟೋ ತೋರಿಸಿ ಸದರಿ ಪೋಟೋದಲ್ಲಿ ಮಿಷನ್ ಮನೆ ಕಾಣುತ್ತಿದೆ ಎಂದು ಒಪಿಕೊಂಡ ಕಾರಣ ಸದರಿ ಪೊಟೋವನ್ನು ನಿಡಿ.3 ಎಂದು ಗುರುತಿಸಲಾಯಿತು. ನೀವು ಕೇಳುತ್ತಿರುವ ರಸ್ತೆಯು ನಕಾಶೆಯಲ್ಲಿ ಇದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ತಾತನ ಕಾಲದಿಂದಲೂ ಅಲ್ಲೇ ಓಡಾಡುತ್ತಿರುವುದು ಎಂದು ನುಡಿಯುತ್ತಾರೆ. ನಿಡಿ.2 ಮತ್ತು 3 ರಲ್ಲಿ ತೆಂಗು ಹಾಗೂ ತೇಗದ ಮರಗಳು ಕಾಣುತ್ತವೆ ಎಂದರೆ ಸರಿ. ಸದರಿ ಮರಗಳು ನನಗೆ ಸೇರಿದ ಮರಗಳು ಎಂದರೆ ಸರಿ. ಸದರಿ ತೇಗದ ಮರಗಳ ಪಕ್ಕದಲ್ಲಿ ಒಂದು ಮಣ್ಣಿನ ದಾರಿ ಇದೆ ಎಂದರೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ